Ref.No. 220–2018

WW–1,

ದಿನಾಂಕಃ 15–10–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ. ಪಿ. ವಕೀಲರಿಂದ ಃ

ನಾನು 2 ನೇ ಪಾರ್ಟಿ ಸಂಸ್ಥೆಯನ್ನು 2016 ರಲ್ಲಿ ಸ್ಟೋರ್ ಕೀಪರ್ ಆಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರುವ ಮೊದಲು ನಾನು ಎಲ್ ಅಂಡ್ ಟಿ ಹಾಗೂ ಇತರ ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡಿರುತ್ತೇನೆ. 2 ನೇ ಪಾರ್ಟಿ ಸಂಸ್ಥೆಯು ಯಾವಾಗ ಪ್ರಾರಂಭವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಕೆಲಸಕ್ಕೆ ಸೇರಿಕೊಂಡಾಗ 2 ನೇ ಪಾರ್ಟಿ ಸಂಸ್ಥೆಯಲ್ಲಿ 450 ರಿಂದ 500 ಜನ ಕೆಲಸಗಾರರು ಇದ್ದರು. ಸದರಿ ಕೆಲಸಗಾರರಲ್ಲಿ ಕಾಂಟ್ರಾಕ್ಟ್ ಲೇಬರ್ಸ, ಖಾಯಂ ನೌಕರರು ಮತ್ತು ಆಡಳಿತ ವರ್ಗದ ಸಿಬ್ಬಂದಿಯವರು ಇದ್ದರು ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯು Printed Circuit Board ಮೇಲೆ Assembly ಮಾಡುವ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ಸದರಿ ಕೆಲಸವನ್ನು ಶಾಲಾ ಕಾಲೇಜಿನಲ್ಲಿ ಕಲಿಯಲು ಸಾಧ್ಯವಿಲ್ಲ ಅದನ್ನು ಸಂಸ್ಥೆ ಯವರೇ ಕಲಿಸಬೇಕಾಗುತ್ತದೆ ಎಂದರೆ ಸರಿ . 2016–17 ರಲ್ಲಿ 2 ನೇ ಪಾರ್ಟಿ ಸಂಸ್ಥೆಯಲ್ಲಿ ನಾನು ಸಂಘವನ್ನು ಸ್ಥಾಪಿಸಿರುತ್ತೇನೆ ಎಂದರೆ ಸರಿ . ಸದರಿ ಸಂಘ ಸ್ಥಾಪನೆಯ ಮೊದಲು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಆಂತರಿಕ ವಿಚಾರಣೆ ಹಾಗೂ Terminations ಗಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಮುಷ್ಕರುಗಳು ಮತ್ತು ಲಾಕ್ ಔಟ್ ಗಳು ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ . ಸಂಘ ಸ್ಥಾಪನೆಯ ಮೊದಲು ನೌಕರರು ಮತ್ತು ಆಡಳಿತ ವರ್ಗದವರ ನಡುವೆ ಒಳ್ಳೆಯ ಸಂಬಂಧ ಇತ್ತು ಎಂದರೆ ಸರಿಯಲ್ಲ . ಸಂಘ ಸ್ಥಾಪನೆಯ ಮೊದಲು ಕನಿಷ್ಟ ವೇತನ ಕಾಯಿದೆಗೆ ಅನುಗುಣವಾಗಿ ವೇತನವನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ . ಆ ಬಗ್ಗೆ ಸಬಂಧಪಟ್ಟ ಪ್ರಾಧಿಕಾರದ ಮುಂದೆ 2018 ರಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಸದರಿ ಅರ್ಜಿಯ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಲಾಗಿರುತ್ತದೆ. ಆಡಳಿತ ವರ್ಗದವರು ಕನಿಷ್ಟ ವೇತನ ಕಾಯಿದೆಗೆ ಅನುಗುಣವಾಗಿ ವೇತವನ್ನು ನೀಡುತ್ತಿದ್ದರಿಂದ ನಾನು ಹೇಳಿದಂತೆ ಯಾವುದೇ ಅರ್ಜಿಯನ್ನು ಪ್ರಾಧಿಕಾರದ ಮುಂದೆ ಸಲ್ಲಿಸಿರುವುದಿಲ್ಲ ಹಾಗೂ ಸದರಿ ಅರ್ಜಿಯ ಪ್ರತಿಯನ್ನು ಈ ನ್ಯಾಯಾಧೀಕರಣ ದ ಮುಂದೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ .

ಸಂಘ ಸ್ಥಾಪನೆಯ ಮೊದಲು ಕಾರ್ಮಿಕರು ಮತ್ತು ಆಡಳಿತ ವರ್ಗದವರ ನಡುವೆ ಯಾವುದೇ ವಿವಾದ ಕಾರ್ಮಿಕ ನ್ಯಾಯಾಲಯದಲ್ಲಿ ಹಾಗೂ ಈ ನ್ಯಾಯಾಧೀಕರಣದ ಮುಂದೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . Vinyas Innovative Technologies worker unit ಅನ್ನು Mysuru District general employees union ಅಡಿಯಲ್ಲಿ ಸ್ಥಾಪಿಸಲಾಗಿರುತ್ತದೆ ಎಂದರೆ ಸರಿ .

ಸದರಿ ಸಂಘದಅಧ್ಯಕರಾಗಿ ಶಶಿಕುಮಾರ್ ಎಂ ಕೆ ಮತ್ತು ಸಲಹೆಗಾರರಾಗಿ ಮುರಳೀಧರ್ ಪೇಶ್ವ ರವರನ್ನು ನೇಮಿಸಲಾಗಿತ್ತು ಎಂದರೆ ಸರಿ . ಸದರಿಯವರು ನಮ್ಮ ಸಂಸ್ಥೆ ಯ ಕಾರ್ಮಿಕರಾಗಿರುವುದಿಲ್ಲ ಎಂದರೆ ಸರಿ. ಉಳಿದ ಪದಾಧಿಕಾರಿಗಳು 2 ನೇ ಪಾರ್ಟಿ ಸಂಸ್ಥೆಯ ಕಾರ್ಮಿಕರಾಗಿರುತ್ತಾರೆ ಎಂದರೆ ಸರಿ . ಈಗಲೂ ಕೂಡ ಶಶಿಕೂಮಾರ್ ಎಂ ಕೆ ರವರು ನಮ್ಮ ಸಂಘದ ಅಧ್ಯಕ್ಷರಾಗಿರುತ್ತಾರೆ. 15.03.2017 ರಲ್ಲಿ ನಮ್ಮ ಸಂಘದಿಂದ ಆಡಳಿತ ವರ್ಗದವರಿಗೆ charter of demands ಅನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ COD ಅನ್ನು ಶಶಿಕುಮಾರ್ ಎಂ ಕೆ ರವರ ಸಹಿ ಮಾಡಿರುತ್ತಾರೆ ಎಂದರೆ ಸರಿ . charter of demands ನಲ್ಲಿ ನಮ್ಮ ಸಂಘದ ಸದಸ್ಯರ ಪಟ್ಟಿಯನ್ನು ಲಗತ್ತಿಸಿರುವುದಿಲ್ಲ ಎಂದರೆ ಸರಿ . ಸಂಸ್ಥೆಯು ಚೆನ್ನಾಗಿ ನಡೆಯುತ್ತಿದ್ದರೂ ಸಹ ನಮಗೆ ಕಮ್ಮಿ ಸಂಬಳ ನೀಡುತ್ತಿದ್ದರಿಂದ COD ಯನ್ನು ಆಡಳಿತ ವರ್ಗ ದವರಿಗೆ ಸಲ್ಲಿಸಲಾಗಿರುತ್ತದೆ. COD ಯನ್ನು ಸಲ್ಲಿಸುವ ಮೊದಲು ಸಂಘದ ಸರ್ವ ಸದಸ್ಯರ ಸಭೆಯನ್ನು ಕರೆಸಿ ಸದರಿ ವಿಚಾರವನ್ನು ಚರ್ಚಿಸಿ ಬೇಡಿಕೆ ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಸಂಘದ ಸರ್ವ ಸದಸ್ಯರ ಸಭೆಯ ತೀರ್ಮಾನವನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

COD ಯಲ್ಲಿ 2 ನೇ ಪಾರ್ಟಿ ಸಂಸ್ಥೆಯವರು ಕನಿಷ್ಟ ವೇತನಕ್ಕಿಂತ ಕಮ್ಮಿ ಸಂಬಳವನ್ನು ನೀಡುತ್ತಿದ್ದಾರೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆಯವರು ನಮ್ಮ ಸಂಘದ ಸದಸ್ಯರಿಗೆ ಎಷ್ಟು ಸಂಬಳವನ್ನು ನೀಡುತ್ತಿದ್ದಾರೆ ಎಂದು ತೋರಿಸಲು ವೇತನ ಚೀಟಿಯನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರುಪಡಿಸಲಾಗಿರುತ್ತದೆ. ಈ ನ್ಯಾಯಾಧೀಕರಣದ ಮುಂದೆ ನನ್ನನ್ನು ಸೇರಿ ಇನೂ ಮೂರು ಜನರ ವೇತನ ಚೀಟಿಯನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿ . ಉಳಿದ ಕಾರ್ಮಿಕರ ವೇತನ ಚೀಟಿಯನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ . ನಿ ಡಬ್ಲ್ಯೂ -1 ವೇತನ ಚೀಟಿಯ ಪ್ರಕಾರ ವೇತನವನ್ನು ಬೇಸಿಕ್ ಮತ್ತು ವಿಡಿಎ ಅಡಿಯಲ್ಲಿ ನೀಡಲಾಗುತ್ತಿದೆ ಎಂದರೆ ಸರಿ. ನಿ ಡಬ್ಲ್ಯೂ -1 ಸೆಪ್ಟೆಂಬರ್ 2019 , ನಿ ಡಬ್ಲ್ಯೂ -2 ಫೆಬ್ರವರಿ 2019, ನಿ ಡಬ್ಲ್ಯೂ -3 ಅಕ್ಟೋಬರ್ 2019 ಮತ್ತು ನಿ ಡಬ್ಲ್ಯೂ -4 ಫೆಬ್ರವರಿ 2019 ಗೆ ಸಬಂಧಿಸಿದ ವೇತನ ಚೀಟಿಗಳಾಗಿರುತ್ತವೆ ಎಂದರೆ ಸರಿ . ಸದರಿ ವೇತನ ಚೀಟಿಯಲ್ಲಿ ಇ ಎಸ್ ಐ ಮತ್ತು ಪಿ ಎಫ್ ಕಟಾವುಗಳನ್ನು ತೋರಿಸಲಾಗಿರುತ್ತದೆ ಎಂದರೆ ಸರಿ . 2017 ರ ಯಾವುದೇ ವೇತನ ಚೀಟಿಯನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . Grade category ಯನ್ನು ಕಾರ್ಮಿಕ ಕಲಿಕೆಯ ಆಧಾರದ ಮೇಲೆ ನೀಡುವಂತೆ ಕೇಳಿಕೊಂಡಿರುತ್ತೇವೆ. COD Demand No. 1 A ಯಲ್ಲಿ Grade category ಯನ್ನು year of experience ನ ಮೇಲೆ ಕೇಳಿರುತ್ತೇವೆ ಕಾರ್ಮಿಕನ ಕೌಶಲ್ಯದ ಮೇಲೆ ಅಲ್ಲ ಎಂದರೆ ಸರಿ . COD Demand No. 1 B ಪ್ರಕಾರ ನಮ್ಮ ಸಂಘದ ಕಾರ್ಮಿಕರಲ್ಲಿ ಯಾರು unskilled, semi-skilled, ಮತ್ತು highly skilled ಆಗಿರುತ್ತಾರೆ ಎಂಬುದರ ಬಗ್ಗೆ ಪಟ್ಟಿಯನ್ನು ಈ ನ್ಯಾಯಾಧೀಕರಣದ ಮುಂದೆ ಸಲ್ಲಿಸಿರುವುದಿಲ್ಲ ಎಂದರೆ ಸರಿ .

ಅದೇ ರೀತಿ unskilled, semi–skilled, ಮತ್ತು highly skilled ಅಡಿಯಲ್ಲಿ ಯಾವ ಯಾವ ಕೆಲಸಗಳು ಬರುತ್ತವೆ ಎಂದು ನಮ್ಮ ಕ್ಲೇಮ್ ಸ್ಟೇಟ್ ಮೆಂಟ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ . unskilled, semi–skilled, ಮತ್ತು highly skilled ನೌಕರರಿಗೆ ಸಂಬಳವನ್ನು ಜಾಸ್ತಿ ಮಾಡುವ ವಿಚಾರದಲ್ಲಿ COD ಯಲ್ಲಿ ನಮೂದಿಸಿದ ವಿವರ ಯಾವ ಆಧಾರದ ಮೇಲೆ ತಯಾರಿಸಲಾಗಿರುತ್ತದೆ ಎಂದು ಈ ನ್ಯಾಯಾಧೀಕರಣದ ಮುಂದೆ ನಮ್ಮ ಕ್ಲೇಮ್ ಸ್ಟೇಟ್ ಮೆಂಟ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ . ಅದೇ ರೀತಿ COD Demand No. 2 ನಲ್ಲಿ ಕೇಳಿದಂತಹ Fitment ಗೂ ಕೂಡ ಯಾವುದೇ ಆಧಾರ ಇರುವುದಿಲ್ಲ ಎಂದರೆ ಸರಿಯಲ್ಲ . ಅದೇ ರೀತಿ COD Demand No. 3 ಯಲ್ಲಿ ಕೇಳಿದಂತಹ fixed dearness allowance ಯನ್ನು ಯಾವುದೇ ಆಧಾರವಿಲ್ಲದೆ ಕೇವಲ ಊಹೆ ಮೇಲೆ ಕೇಳಲಾಗಿರುತ್ತದೆ ಎಂದರೆ ಸರಿಯಲ್ಲ . fixed dearness allowance ಯನ್ನು ಮೊದಲ ಬಾರಿ COD ಯಲ್ಲಿ ಕೇಳಲಾಗಿರುತ್ತದೆ ಎಂದರೆ ಸರಿ . ಸರ್ಕಾರವು Consumer price index ಅನ್ನು ದಿನನಿತ್ಯದ ಅಗತ್ಯ ವಸ್ತುಗಳ ಹಣದುಬ್ಬರ ದ ಮೇಲೆ ನಿಗದಿ ಪಡಿಸುತ್ತಾರೆ. VDA ಅನ್ನು ಸರ್ಕಾರದವರು ಒಂದು ಸೂಚ್ಯಾಂಕಕ್ಕೆ ನಾಲ್ಕು ಪೈಸೆಯನ್ನು ಗುಣಿಸಿ ನಿಗದಿ ಪಡಿಸುತ್ತಾರೆ ಎಂದರೆ ಸರಿ .COD ಯಲ್ಲಿ VDA ಅನ್ನು ಒಂದು ಸೂಚ್ಯಾಂಕಕ್ಕೆ ಕಾರ್ಮಿಕರು ಕೆಲಸ ಮಾಡಿದಂತಹ ಅವಧಿಗೆ ಅನುಗುಣವಾಗಿ ಐದು, ಆರು, ಏಳು ರೂಪಾಯಿಯನ್ನು per point ನೊಂದಿಗೆ ಗುಣಿಸಿ ನೀಡಬೇಕು ಎಂದು ಕೇಳಿರುತ್ತೇವೆ ಎಂದರೆ ಸರಿ . COD Demand No. 5 ನಲ್ಲಿ House Rent Allowance ಅನ್ನು Basic, FDA, VDA ಮತ್ತು Special Pay ಮೇಲೆ 20% ರಂತೆ ನಿಗದಿ ಪಡಿಸಬೇಕು ಎಂದು ಕೇಳಿರುತ್ತೇವೆ ಎಂದರೆ ಸರಿ . COD ಯನ್ನು ನೀಡುವ ಕಾಲಕ್ಕೆ Basic, FDA, VDA ಮತ್ತು Special Pay ನಿಗದಿಯಾಗಿರುವುದಿಲ್ಲ ಎಂದರೆ ಸರಿಯಲ್ಲ . ಅದಕ್ಕೆ ಸಂಬಂಧ ಪಟ್ಟಂತೆ 2017 ನೇ ಇಸವಿಯ pay slip ಗಳನ್ನು ಈ ನ್ಯಾಯಾಧೀಕರಣ ದ ಮುಂದೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ .2017 ರಲ್ಲಿ 2 ನೇ ಪಾರ್ಟಿ ಸಂಸ್ಥೆಯಲ್ಲಿ FDA ಮತ್ತು Special pay components ಗಳು ಇರಲಿಲ್ಲ ಎಂದರೆ ಸರಿ . COD Demand No. 6 ರಲ್ಲಿ LTA ಯನ್ನು ಯಾವ ಆಧಾರದ ಮೇಲೆ ಕೇಳುತ್ತಿದ್ದೇವೆ ಎಂದು ನಮ್ಮ ಕ್ಲೇಮ್ ಸ್ಟೇಟ್ ಮೆಂಟ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ . COD Demand No. 7 ರಲ್ಲಿ Education Allowance ಕಾರ್ಮಿಕರಿಗೋ ಅಥವಾ ಅವರ ಮಕ್ಕಳಿಗೋ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ . ನಮ್ಮ ಸಂಘದ ಕಾರ್ಮಿಕರ ಮಕ್ಕಳುಗಳು ಯಾವ ಯಾವ ಶಾಲೆಯಲ್ಲಿ ಎಷ್ಟು ಜನ ಓದುತ್ತಿದಾರೆ ಎಂದು 2 ನೇ ಪಾರ್ಟಿ ಸಂಸ್ಥೆ ಯ ಮುಂದಾಗಲಿ, ಈ ನ್ಯಾಯಾಧೀಕರಣದ ಮುಂದಾಗಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ಸಮವಸ್ತ್ರ ಕೊಡುವುದಿಲ್ಲ. COD Demand No. 8 ರಲ್ಲಿ Washing Allowance ನ್ನು ಯಾವ ಬಟ್ಟೆ ಯನ್ನು ಒಗೆಯಲು ಕೇಳಲಾಗಿರುತ್ತದೆ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ .

COD Demand No. 9 ರಲ್ಲಿ Workers death relief ಅನ್ನು ಯಾವ ಆಧಾರದ ಮೇಲೆ ಕೇಳಲಾಗಿರುತ್ತದೆ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಾರ್ಮಿಕರ ಅಕಾಲಿಕ ಮರಣ ಹೊಂದಿದ ಸಂದರ್ಬದಲ್ಲಿ ಸದರಿ ಮೊತ್ತವನ್ನು ನೀಡಬೇಕು ಎಂದು ಕೇಳಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ . COD Demand No. 10 ರಲ್ಲಿ Benevolent fund ಆಧಾರ ರಹಿತವಾಗಿರುತ್ತದೆ ಎಂದರೆ ಸರಿಯಲ್ಲ .

ನಮ್ಮ ಸಂಘದ ಪ್ರತಿ ಸದಸ್ಯರು ಪ್ರತಿ ತಿಂಗಳು 5 ರೂಪಾಯಿಯನ್ನು ಸಂಘದ ಸದಸ್ಯತ್ವ ಶುಲ್ಕ ಪಾವತಿಸುತ್ತಾರೆ. ನಮ್ಮ ಸಂಘದಿಂದ Death relief fund ಅನ್ನು ಸದಸ್ಯರಿಗೆ ನೀಡಲಾಗುವುದಿಲ್ಲ.

2 ನೇ ಪಾರ್ಟಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.